ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1432
2. ವಿಧಾನ ಪರಿಷತ್ತಿನ ಸದಸ್ಯರ ಹೆಸರು : ಶ್ರೀ ಅ.ದೇವೇಗೌಡ (ಪದವೀಧರರ ಕ್ಷೇತ್ರ)
3. ಉತ್ತರಿಸುವ ದಿನಾಂಕ : 19-03-2020
4. ಉತ್ತರಿಸುವ ಸಚಿವರು : ಮಾನ್ಯ ಗೃಹ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯ ವಿಪತ್ತು ಸ್ಪಂದನಾ ಪಡೆ SDRF ಅನ್ನು ರಚಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದಲ್ಲಿ, SDRF ರಚಿಸಲು ಇರುವ ಮಾರ್ಗಸೂಚಿಗಳೇನು ಹಾಗೂ ಇದಕ್ಕಾಗಿ ಬಿಡುಗಡೆಯಾದ ಅನುದಾನವೆಷ್ಟು;	ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರವು (National Disaster Management Authority) ನೀಡಿರುವ ಸಲಹೆ ಮೇರೆಗೆ ವಿಪತ್ತು ನಿರ್ವಹಣಾ ಅಧಿನಿಯಮ 2005 ರನ್ವಯ ರಾಷ್ಟ್ರ ಮಟ್ಟದಲ್ಲಿ NDRF ಕಾರ್ಯ ನಿರ್ವಹಿಸುತ್ತಿದೆ. ಅದರಂತೆ, The Disaster Management Act, 2005) (No.53 of 2005) ರನ್ವಯ ಸರ್ಕಾರದ ಆದೇಶ ಸಂಖ್ಯೆ:ಒಇ 183 ಕಅಸೇ 2012, ದಿ:14-06-2013 ರಲ್ಲಿ SDRF ಅನ್ನು ರಚಿಸಲಾಗಿರುತ್ತದೆ. **<u>ಅನುದಾನದ ವಿವರ:</u>** ➢ ಸರ್ಕಾರದ ಆದೇಶ ಸಂಖ್ಯೆ:ಆರ್‌ಡಿ 100 ಇಟಿಸಿ 2010, ದಿನಾಂಕ:30-11-2013 ರಲ್ಲಿ (Capacity Building) ಯೋಜನೆಯಡಿ ರೂ.33.00 ಲಕ್ಷಗಳಿಗೆ ಮಂಜೂರಾತಿ ನೀಡಿದೆ. ➢ ಸರ್ಕಾರದ ಆದೇಶ ಸಂಖ್ಯೆ:ಆರ್‌ಡಿ 16 ಇಟಿಸಿ 2015, ದಿನಾಂಕ:24-06-2015 ರಲ್ಲಿ (Capacity Building) ಯೋಜನೆಯಡಿ ರೂ.100.00 ಲಕ್ಷಗಳಿಗೆ ಮಂಜೂರಾತಿ ನೀಡಿದೆ. ➢ ಸರ್ಕಾರದ ಆದೇಶ ಸಂಖ್ಯೆ:ಆರ್‌ಡಿ 346 ಟಿಎನ್‌ಆರ್ 2012, ದಿನಾಂಕ:03-03-2014 ರಲ್ಲಿ ರಾಜ್ಯ ವಿಪತ್ತು ಸ್ಪಂದನಾ ಪಡೆಗೆ ಶೋಧನಾ ಮತ್ತು ರಕ್ಷಣಾ ಸಾಮಾಗ್ರಿಗಳ ಖರೀದಿಗಾಗಿ ರೂ.7.30 ಕೋಟಿ ಅನುದಾನವನ್ನು ಮಂಜೂರು ಮಾಡಿದೆ. ➢ 2019-20ನೇ ಸಾಲಿನ ಆಯವ್ಯಯದಲ್ಲಿ ರೂ.10.00 ಕೋಟಿ ಅನುದಾನವನ್ನು ಯಂತ್ರೋಪಕರಣಗಳು ಮತ್ತು ಸಾಧನ ಸಾಮಗ್ರಿಗಳ ಖರೀದಿಗೆ ಹಂಚಿಕೆ ಮಾಡಲಾಗಿರುತ್ತದೆ.
ಆ)	SDRF ರಚಿಸಲು ಮಂಜೂರಾಗಿರುವ ಹುದ್ದೆಗಳು ಎಷ್ಟು; ಹುದ್ದೆಗಳನ್ನು ಭರ್ತಿ ಮಾಡಲು ಇರುವ ಮಾನದಂಡಗಳೇನು;	SDRF ರಚಿಸಲು ಮಂಜೂರಾಗಿರುವ ಹುದ್ದೆಗಳು ಒಂದು ಕಂಪನಿಗೆ '127' ರಂತೆ ಒಟ್ಟು '04' ಕಂಪನಿಗಳಿಗೆ '508' ಹುದ್ದೆಗಳು ಮಂಜೂರಾಗಿದೆ. ಮಂಜೂರಾಗಿರುವ ಒಟ್ಟು '508' ಹುದ್ದೆಗಳನ್ನು ಎರವಲು ಸೇವೆಯ (Rotation Basis) ಆಧಾರದ ಮೇಲೆ ಅಗ್ನಿಶಾಮಕ ಇಲಾಖೆ, ಕರ್ನಾಟಕ ರಾಜ್ಯ ಮೀಸಲು ಪೊಲೀಸ್, ಕರ್ನಾಟಕ ರಾಜ್ಯ ಕೈಗಾರಿಕ ಭದ್ರತಾ ಪಡೆ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಭರ್ತಿ ಮಾಡಲಾಗುವುದು.
ಇ)	ಕರ್ನಾಟಕ ರಾಜ್ಯ ಅಗ್ನಿಶಾಮಕ ಇಲಾಖೆಗೆ ಮಂಜೂರಾಗಿರುವ ಹುದ್ದೆಗಳೆಷ್ಟು; ಈ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿಗಳೆಷ್ಟು ಹಾಗೂ ಖಾಲಿ ಇರುವ ಹುದ್ದೆಗಳೆಷ್ಟು? (ಮಾಹಿತಿ ನೀಡುವುದು)	ಕರ್ನಾಟಕ ರಾಜ್ಯ ಅಗ್ನಿಶಾಮಕ ಇಲಾಖೆಗೆ ಒಟ್ಟು 7042 ವಿವಿಧ ಹುದ್ದೆಗಳು ಮಂಜೂರಾಗಿದ್ದು, ಇದರಲ್ಲಿ 4623 ಹುದ್ದೆಗಳು ಭರ್ತಿ ಮಾಡಿದ್ದು, 2419 ಹುದ್ದೆಗಳು ಖಾಲಿ ಇರುತ್ತವೆ.

...2

ಈ)	ಅಗ್ನಿಶಾಮಕ ಇಲಾಖೆಯಲ್ಲಿ ಹಾಲಿ ಸಿಬ್ಬಂದಿಗಳ ಕೊರತೆ ಇದ್ದರೂ ಸಿಬ್ಬಂದಿಗಳನ್ನು SDRF ಗೆ ನಿಯೋಜಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದಕ್ಕೆ ಅಗ್ನಿಶಾಮಕ ಇಲಾಖೆಯ ಸಿಬ್ಬಂದಿಗಳ ಒಪ್ಪಿಗೆ ಪಡೆಯಲಾಗಿದೆಯೇ; ಇಲ್ಲದಿದ್ದಲ್ಲಿ, ಹೇಗೆ ನಿಯೋಜಿಸಲಾಗುತ್ತಿದೆ;	ಒಟ್ಟು ಮಂಜೂರಾಗಿರುವ 508 ಹುದ್ದೆಗಳಲ್ಲಿ 119 ಹುದ್ದೆಗಳು ಅಗ್ನಿಶಾಮಕ ಇಲಾಖೆಯಿಂದ ನಿಯೋಜಿಸಿದ್ದು, ಇದರಲ್ಲಿ ಪ್ರಸ್ತುತ 42 ಹುದ್ದೆಗಳು ನಾಲ್ಕು ಕಂಪನಿಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಹಾಲಿ ನಿಯೋಜನೆಗೊಂಡಿರುವ ಅಗ್ನಿಶಾಮಕರುಗಳ ಒಪ್ಪಿಗೆ ಮೇರೆಗೆ SDRF ಗೆ ನಿಯೋಜಿಸಲಾಗಿದೆ.
ಉ)	SDRF ಗೆ ನಿಯೋಜಿಸಿದ್ದಲ್ಲಿ, ಇಲಾಖೆಯಲ್ಲಿ ಸಿಬ್ಬಂದಿಗಳ ಕೊರತೆಯುಂಟಾಗಿ ಅಗ್ನಿ ಅನಾಹುತಗಳು, ತುರ್ತು ಕಾರ್ಯಗಳನ್ನು ನಿರ್ವಹಿಸಲು ತೊಂದರೆಯಾಗಿರುವುದನ್ನು ಯಾವ ರೀತಿ ನೀಗಿಸಲಾಗುವುದು;	ಅಗ್ನಿಶಾಮಕ ಇಲಾಖೆಯಲ್ಲಿ ಸಿಬ್ಬಂದಿಗಳ ಕೊರತೆಯನ್ನು ಗೃಹರಕ್ಷಕರ ಸೇವೆಯನ್ನು ಬಳಸಿಕೊಳ್ಳುವುದರ ಮೂಲಕ ಪರಿಹರಿಸಲಾಗುತ್ತಿದೆ.
ಊ)	ಅಗ್ನಿಶಾಮಕ ಇಲಾಖೆಯ ಸಿಬ್ಬಂದಿಗಳನ್ನು SDRF ಗೆ ನಿಯೋಜಿಸಿ ಅಗ್ನಿ ಅನಾಹುತ ನಂದಿಸುವ ಕಾರ್ಯಕ್ಕೆ ಅನನುಭವಿಗಳಾದ ಗೃಹರಕ್ಷಕರನ್ನು ನಿಯೋಜಿಸಿದರೆ ಅನಾಹುತಗಳಾಗುವುದಿಲ್ಲವೇ; ಇವೆಲ್ಲವೂಗಳನ್ನು ತಪ್ಪಿಸಲು ಸರ್ಕಾರವು ಕೈಗೊಳ್ಳುವ ಕ್ರಮಗಳೇನು;	ಅಗ್ನಿಶಾಮಕ ಇಲಾಖೆಯಲ್ಲಿ ಅಗ್ನಿಶಾಮಕರ ಕೊರತೆ ಇರುವ ಪ್ರಯುಕ್ತ ಇವರ ಬದಲಿಗೆ ಗೃಹ ರಕ್ಷಕರನ್ನು ತೆಗೆದುಕೊಂಡು ಕಾರ್ಯನಿರ್ವಹಿಸಲಾಗುತ್ತಿದೆ. ಆದರೆ ಗೃಹರಕ್ಷಕರು ಅನನುಭವಿಗಳಾದ ಕಾರಣ ಅಗ್ನಿಶಾಮಕ ಠಾಣೆಯಲ್ಲಿ ಪಹರೆ ಕರ್ತವ್ಯ, ದೂರವಾಣಿ ಚಾಲಕ ಹಾಗೂ ಇತರೆ ಕಾರ್ಯಗಳಿಗೆ ಇವರ ಸೇವೆಯನ್ನು ಪಡೆಯಲಾಗುತ್ತಿದೆ.
ಋ)	SDRF ಗೆ ನಿಯೋಜಿಸುತ್ತಿರುವ ಅಗ್ನಿಶಾಮಕ ದಳದ ಸಿಬ್ಬಂದಿಯವರನ್ನು ಇಲಾಖೆಯಲ್ಲಿ ಅಗ್ನಿ ನಂದಿಸುವ ಕಾರ್ಯದಲ್ಲಿ ಮುಂದುವರೆಸಲಾಗುವುದೇ?	ಹೌದು, SDRF ಗೆ ನಿಯೋಜಿಸುತ್ತಿರುವ ಅಗ್ನಿಶಾಮಕ ದಳದ ಸಿಬ್ಬಂದಿಯವರನ್ನು ತುರ್ತು ಸಂದರ್ಭಗಳಲ್ಲಿ ಬೆಂಕಿ ನಂದಿಸುವ ಕಾರ್ಯದಲ್ಲಿ ತೊಡಗಿಸಿಕೊಳ್ಳಲಾಗುತ್ತಿದೆ.

ಸಂಖ್ಯೆ: ಒಇ 82 ಕಅಸೇ 2020

(ಬಸವರಾಜ ಬೊಮ್ಮಾಯಿ)
ಗೃಹ ಸಚಿವರು.